Foreign Exchange earned on Fish Products

283. **Sri B. BHASKER SHETTY** (Kaup) [On behalf of SRI RATNAKUMAR KATTEMAR (Mudabidri)].—

Will the Minister of State for Ports and Fisheries be pleased to state :—

the amount of foreign exchange earned by exporting the fish products of the Mysore State during the course of the last year ?

Sri H. C. LINGA REDDY (Minister of State for Ports and Fisheris).—

About Rs. 1.04 crores.

ಶ್ರೀ ಬಿ. ಭಾಸ್ಕರ ಶೆಟ್ಟಿ.—1.04 ಕೋಟಿ ರೂಪಾಯಿ ವಿದೇಶಿ ವಿನಿಮಯವನ್ನು ಗಳಿಸಿರುವುದರಲ್ಲಿ ಸರ್ಕಾರಿ ವಲಯದಿಂದ ಎಷ್ಟು ಬಂದಿದೆ ಮತ್ತು ಖಾಸಗಿ ವಲಯದಿಂದ ಎಷ್ಟು ಬಂದಿದೆ ಎನ್ನುವುದನ್ನು ತಿಳಿಸಲಾಗುತ್ತದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈಗ ನದ್ಯಕ್ಕೆ ಸರ್ಕಾರಿ ವಲಯದಲ್ಲಿ ಯಾವ ವ್ಯಾಪಾರವನ್ನೂ ನಡೆಸುತ್ತಿಲ್ಲ. ಖಾಸಗಿಯವರು ನಮ್ಮ ಕರಾವಳಿಯಲ್ಲಿ ಸಿಕ್ಕಿದಂಥ ಮೀನನ್ನು ರಫ್ತು ಮಾಡಿದ್ದರಿಂದ ಸರ್ಕಾರಕ್ಕೆ ಇಷ್ಟು ವಿದೇಶಿ ವಿನಿಮಯ ದೊರಕಿದೆ ಎನ್ನುವ ಲೆಕ್ಕಾಚಾರ ನಮಗೆ ಸಿಕ್ಕಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮೀನುಗಾರಿಕೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಸರ್ಕಾರ ಕೈಕೊಂಡಿರುವುದರಿಂದ ಮೀನನ್ನು ಹಿಡಿಯುವುದಕ್ಕೆ ಅವಕಾಶವಿದೆ. ಸರ್ಕಾರವೂ ಮೀನುಗಾರಿಕೆಯಲ್ಲಿ ತೊಡಗಿ, ಮೀನನ್ನು ಹೊರದೇಶಗಳಿಗೆ ಕಳುಹಿಸಿ ವಿದೇಶಿ ವಿನಿಮಯವನ್ನು ಗಳಿಸಬಹುದಲ್ಲವೇ!

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈಗ ನಮಗೆ ವಿದೇಶಿ ವಿನಿಮಯ ಹೆಚ್ಚಾಗಿ ಬರುತ್ತಿದೆ. ಉದಾಹರಣೆಗೆ 1966-67ರಲ್ಲಿ 438 ಮೆಟ್ರಿಕ್ ಟನ್ ಮೀನನ್ನು ರಫ್ತು ಮಾಡಿ 40 ಲಕ್ಷ ರೂಪಾಯಿ ಗಳಿಸಲಾಯಿತು, 1967-68 ರಲ್ಲಿ 602 ಮೆಟ್ರಿಕ್ ಟನ್ ಮೀನನ್ನು ರಫ್ತು ಮಾಡಿ ಸುಮಾರು 50 ಲಕ್ಷ ರೂಪಾಯಿ ವಿದೇಶಿ ವಿನಿಮಯವನ್ನು ಗಳಿಸಲಾಯಿತು, 1968-69ರಲ್ಲಿ 1,230 ಮೆಟ್ರಿಕ್ ಟನ್ ಮೀನನ್ನು ರಫ್ತು ಮಾಡಿ 1.04 ಕೋಟಿ ರೂಪಾಯಿಗಳ ವಿದೇಶಿ ವಿನಿಮಯವನ್ನು ಗಳಿಸಲಾಯಿತು. ಡೀಪ್ ಸೀ ಫಿಷಿಂಗ್ ತೆಗೆದುಕೊಂಡಿರುವುದರಿಂದ ಮುಂದಿನ ವರ್ಷ ಇದಕ್ಕೆ ಎರಡರಷ್ಟು ಮತ್ತು ನಾಲ್ಕನೆ ಯೋಜನೆ ಮುಗಿಯುವುದರೊಳಗಾಗಿ 5 ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯವನ್ನು ಗಳಿಸುವ ಪ್ರಯತ್ನವಿದೆ.

MR. SPEAKER.—Why should it not be nationalised and foreign exchange earned for the Government ? That is the question.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ವಿದೇಶಿ ವಿನಿಮಯವನ್ನು ಹೆಚ್ಚು ಸಂಪಾದನೆ ಮಾಡಬೇಕು ಎನ್ನುವ ಉದ್ದೇಶದಿಂದಲೇ ಫಿಷರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿ ಆ ಮುಖಾಂತರ ಹೆಚ್ಚಿನ ವಿದೇಶಿ ವಿನಿಮಯವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಫಿಷರಿ ಕಾರ್ಪೊರೇಷನ್ ಇನ್ನೂ ಮಾಡಲಲ್ಲ. ಖಾಸಗಿಯವರು ವಿದೇಶಿ ವಿನಿಮಯವನ್ನು ಗಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ಮತ್ತೊಂದು ಅವಕಾಶವನ್ನು ಕೊಡಿ ಎಂದು ಹೇಳಿದರೂ ಸರ್ಕಾರ ಅದಕ್ಕೆ ಸಾಕಷ್ಟು ಅವಕಾಶ ಕೊಡಲಲ್ಲ ಎನ್ನುವ ವಿಚಾರವಿದೆ, ಇದು ನಿಜವೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಐಸ್ ಪ್ಲಾಂಟ್, ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ 20 ಸರ್ಕಾರಿ ವಲಯದಲ್ಲಿದೆ, 14 ಖಾಸಗಿ ವಲಯದಲ್ಲಿವೆ, ಎರಡು ಕೋ-ಆಪರೇಟಿವ್ ಸೆಕ್ಟಾರಿನಲ್ಲಿವೆ. ಖಾಸಗಿ ವಲಯದಲ್ಲಿ ಹೆಚ್ಚಾಗಿ ಜನ ಮುಂದೆ ಬರುತ್ತ ಇರುವುದರಿಂದ ಮೀನು ಹೆಚ್ಚಾಗಿ ಸಿಕ್ಕಿ, ಬೇರೆ ದೇಶಗಳಲ್ಲಿ ಫ್ರಾನ್ಸ್‌ಗೆ ಇನ್ನೂ ಹೆಚ್ಚಿನ ಬೇಡಿಕೆ ಇರುವುದರಿಂದ ಅದರ ರಫ್ತನ್ನು ಹೆಚ್ಚು ಮಾಡತಕ್ಕ ಕೆಲಸವನ್ನು ಕೈಗೊಳ್ಳುತ್ತಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—1.04 ಕೋಟಿ ರೂಪಾಯಿ ವಿದೇಶಿ ವಿನಿಮಯವನ್ನು ಗಳಿಸಿರಾಗಿದೆ ಎಂದು ತಿಳಿಸಿದ್ದಾರೆ. ಈ ಹಣವನ್ನು ಆ ಕೈಗಾರಿಕೆಯ ಪ್ರಗತಿಗಾಗಿ ಖರ್ಚು ಮಾಡುವ ಅಧಿಕಾರವನ್ನು ಅವರಿಗೇ ಬಿಡರಾಗಿದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದು ಇಂಡಿಯಾ ಸರ್ಕಾರಕ್ಕೆ ಬಂದಿದೆ. ವಿದೇಶಿ ವಿನಿಮಯವನ್ನು ಗಳಿಸಲು ಯಾರು ಏನು ರಫ್ತು ಮಾಡಿದ್ದಾರೆಯೋ ಅವರಿಗೆ ಇಂಡಿಯಾ ಸರ್ಕಾರದವರು ಸಹಾಯವನ್ನು ಕೊಟ್ಟಿದ್ದಾರೆಂದು ಕಾಣುತ್ತದೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಸಮಾಜವಾದವನ್ನು ಪ್ರತಿಪಾದನೆ ಮಾಡುವ ಸರ್ಕಾರ ಈ ಉದ್ಯಮವನ್ನು ಇನ್ನೂ ರಾಷ್ಟ್ರೀಕರಣ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ರಾಷ್ಟ್ರೀಕರಣ ಮಾಡಬೇಕೆಂಬ ಉದ್ದೇಶವಿಲ್ಲ. ಖಾಸಗಿಯವರಿಗೆ ಮತ್ತು ಸಹಕಾರಿ ಕ್ಷೇತ್ರದಲ್ಲಿ ಏನನ್ನು ಹಿಡಿಯುವ ಉದ್ಯಮದಲ್ಲಿ ತೊಡಗಿರುವವರಿಗೆ ರಾಷ್ಟ್ರೀಕರಣ ಮಾಡಿ ತೊಂದರೆಪಡಿಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಸದ್ಯಕ್ಕೆ ಫಿಷರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ ಐಸ್ ಪ್ಲಾಂಟ್, ಕೋಲ್ಡ್ ಸ್ಟೋರೇಜಸ್ ಮತ್ತು ಫಿಷಿಂಗ್ ಯಾರ್ಡ್, ಬೋಟ್ ಬಿಲ್ಡಿಂಗ್ ಯಾರ್ಡ್ ಇವನ್ನೆಲ್ಲ ತೆಗೆದುಕೊಂಡು ಡೀಪ್ ಸೀ ಫಿಷಿಂಗೆ ಅವಕಾಶ ಹೆಚ್ಚು ಮಾಡಿ ಕಮರ್ಷಿಯಲ್ ಲೈನ್ಸ್ ಮೇರೆ ಈ ಸಂಸ್ಥೆಯನ್ನು ನಡೆಸಿಕೊಂಡು ಹೆಚ್ಚು ಸಂಪಾದನೆ ಮಾಡಬೇಕೆಂಬ ಉದ್ದೇಶವಿದೆ.

Sri V. N. PATIL.—In view of the fact that fish has been considered as one of the most important items of food, has Government considered seriously the question of nationalisation of fisheries in the coastal areas so as to increase the output and solve the food problem to a considerable extent ?

Sri H. C. LINGA REDDY.—That is covered by the next question, Sir.

ಶ್ರೀ ಬಿ. ಭಾನ್ಕರ ಶೆಟ್ಟಿ.—ಕಾರ್ಪೊರೇಷನ್ ಯಾವಾಗ ಆಗುವುದೆಂಬುದನ್ನು ನಿರ್ದಿಷ್ಟವಾಗಿ ಹೇಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ವಿಷಯ ಸರಕಾರದ ಪರ್ಯಾಲೋಚನೆಯಲ್ಲಿದೆ, ಮಾಡುವುದಾದರೆ ಯಾವಾಗ ಮಾಡಬೇಕೆಂಬುದನ್ನು ತೀರ್ಮಾನ ಮಾಡುತ್ತೇವೆ.

Nationalisation of Sea Wealth

284. Sri RATNAKUMAR KATTEMAR (Mudabidri).—

Will the Minister of State for Ports and Fisheries be pleased to state :—

whether there is any proposal to undertake Nationalisation of sea wealth such as export business of Fish Product ?

Sri H. C. LINGA REDDY (Minister of State for Ports and Fisheries).—

No.

ಶ್ರೀ ಬಿ. ಭಾನ್ಕರ ಶೆಟ್ಟಿ.—ಸಾಗರ ಸಂಪತ್ತನ್ನು ರಫ್ತು ಮಾಡುವ ಕಾರ್ಯವನ್ನು ರಾಷ್ಟ್ರೀಕರಣಗೊಳಿಸುವ ಸುಳಹೆ ಇಲ್ಲವೆಂದು ಉತ್ತರ ಕೊಡರಾಗಿದೆ. ಇದು ಸಮಾಜವಾದೀ ಧೋರಣೆಗೆ ವಿರುದ್ಧವಾಗಿಲ್ಲವೇ ?